ಯಾರಿಗೂ ಗೊತ್ತಿಲ್ಲದೆ ವಠಾರದ ಬಾಯಲ್ಲಿ ಆಕೆ ಮಾಮಿಯಾದರೆ, ಅವಳ ಮಗನನ್ನು ಸ್ವಾಮಿ ಎಂದು ಕರೆಯುತ್ತಿದ್ದೆವು.

ಸಾದು ಕಪ್ಪುಬಣ್ಣ, ಸಾಧಾರಣ ಮೈಕಟ್ಟು, ಮೂಗಿನ ಎರಡೂ ಬದಿಗೆ ಹೊಳೆಯುವ ಹರಳಿನ ಮೂಗುತಿ, ದೈವ ಭಕ್ತಿಯಲ್ಲಿ ಮಿಂದೇಳುವಂತೆ ಬಳಿದ ವಿಭೂತಿಯ ನಡುವೆ ಕಾಸಿನಗಲದ ಕುಂಕುಮ, ಹಚ್ಚೆ ಹಾಕಿಸಿಕೊಂಡ ಕೈಗಳಲ್ಲಿ ಗಲಗಲ ಸದ್ದು ಮಾಡುವ ಡಜನ್ನು ಹಸಿರು ಬಳೆಗಳು. ಮಂಡಿ ನೋವು ಎಂದು ಕಾಲಿಗೆ ಸದಾ ಸಾಕ್ಸ್ ಹಾಕಿರುತ್ತಿದ್ದ ಮಾಮಿ ಕತ್ತಲ ಗೂಡಿನಂತಿದ್ದ ಅವಳ ಪುಟ್ಟ ಕೋಣೆಯಲ್ಲಿ ಸದಾ ಕೆಮ್ಮುತ್ತ ಮಲಗಿರುತ್ತಿದ್ದ ತಾತನಿಗೆ ಮೂರನೇ ಹೆಂಡತಿಯಂತೆ. ವಾಹನ ಚಾಲಕರಾಗಿದ್ದ ಅವರು ಕಾಡಿನಲ್ಲಿ ಸೇಂದಿ ಇಳಿಸುವ ಕೆಲಸಕ್ಕೆ ಹೋಗುತ್ತಿದ್ದಾಗ ಈಕೆಯ ಮೋಹಪಾಶಕ್ಕೆ ಬಿದ್ದು ಮದುವೆಯಾದರಂತೆ ಎನ್ನುವ ರೋಚಕ ಕತೆಗಳು ನಮ್ಮ ವಠಾರದಲ್ಲಿ ಹರಿದಾಡಿ ಮಾಮಿಯ ಭಯಕ್ಕೆ ಅಲ್ಲೇ ಸಾಯುತ್ತಿದ್ದವು!

ನಾವು ಆ ಮನೆಗೆ ಬಂದ ಶುರುವಿನಲ್ಲಿ ಅಮ್ಮ ಒಮ್ಮೆ ಬಟ್ಟೆ ಒಗೆದು ಒಣ ಹಾಕಿ, ಒಂದು ಸಣ್ಣ ನಿದ್ದೆ ತೆಗೆದು ಅಂಗಳಕ್ಕೆ ಬಂದಾಗ ಗಾಬರಿ ಆಗಿತ್ತು! ತಂದೆಯವರು ಮನೆ ಖರ್ಚಿಗೆಂದು ಕಳಿಸುತ್ತಿದ್ದ ಲಿಮಿಟೆಡ್ ಹಣದಲ್ಲಿ ಕಷ್ಟ ಪಟ್ಟು ಉಳಿಸಿ ತಮ್ಮನ ಮದುವೆಗೆಂದು ಹೊಸದಾಗಿ ಹೊಲೆಸಿದ ಐದೂ

